
ಕತೆ

ಎನ್. ಮಧುಸೂದನ

# ಗಡಿಯಾರದಂಗಡಿ



ಗಡಿಯಾರದಂಗಡಿಯ ಮುಂದೆ ಬೆದರಿದೆ ಕುದುರೆ
ಕಣ್ಣ ಪಟ್ಟಿಯ ಕಂಡು ಕನ್ನಡಿಯಲಿ.
ಗಂಟೆ ಎಷ್ಟೆಂದು ಕೇಳಿದರೇನ ಹೇಳಲೆ?
ಎಷ್ಟೊಂದು ಗಡಿಯಾರ ಅಂಗಡಿಯಲಿ!
—ಕೆ.ಎಸ್. ನರಸಿಂಹಸ್ವಾಮಿ

ರಮೇಶ ತನ್ನ ಒಡೆತನದ ಹಳೇ ಕಟ್ಟಡವನ್ನು ಒಮ್ಮೆ ಪೂರ್ಣವಾಗಿ ಅವಲೋಕಿಸಿದ. 'ಆ ಗಡಿಯಾರದಂಗಡಿಯೊಂದು ಖಾಲಿಯಾದರೆ ಈ ಕಟ್ಟಡ ಒಡೆಯಬಹುದು. ಆಮೇಲೆ ಇಲ್ಲೊಂದು ಬಹುಮಹಡಿ ಕಟ್ಟಡ ತಲೆ ಎತ್ತುತ್ತದೆ' ಎಂದು ಕೊಳ್ಳುತ್ತಾ ಎದುರಲ್ಲಿ ಆಗಲೇ ಒಂದು ಗಗನಚುಂಬಿ ಕಟ್ಟಡವಿದೆ ಎಂಬಂತೆ ಅವನು ನಿಧಾನವಾಗಿ ತಲೆಯನ್ನು ಮೇಲೆತ್ತಿ ನೋಡಿದ.

ತನ್ನ ಮಾಲೀಕತ್ವದಲ್ಲಿದ್ದ ಒಂದು ಮಹಡಿಯ ಹಳೇ ಕಟ್ಟಡವನ್ನು ಒಡೆದು ಗಗನಚುಂಬಿ ಕಟ್ಟಡ ಕಟ್ಟುವ ರಮೇಶನ ಭವಿಷ್ಯದ ಕನಸಿಗೆ ಅಡ್ಡಿಯಾಗಿದ್ದಿದ್ದು ಗಡಿಯಾರದಂಗಡಿ ಮಾಲೀಕ ಆದಿಮೂರ್ತಿ. ರಮೇಶನ ಅಪ್ಪ ಕಟ್ಟಡ ನಿರ್ಮಿಸಿದ ತಕ್ಷಣ ಬಾಡಿಗೆಗೆ ಬಂದವನು.